# “ಸಿಡ್ನಿ ಕನ್ನಡ ಸಂಘ – "ಸುವರ್ಣ ಕರ್ನಾಟಕ ೨೦೦೬”



ಡಾ ನಾಗಮ್ಮ, ಡಾ ಮಧುಸೂದನ



ಶ್ರೀಮತಿ ಪುಷ್ಪ ಜಗದೀಶ್



ಡಾ ಮಧುಸೂದನ



ಶ್ರೀ ಚಂದ್ರ ಶೇಖರ ದೇವುಡು ಶ್ರೀಮತಿ ಶುಭಾ ರವಿ








ಡಾ ನಾಗಮ್ಮ, ಶ್ರೀ ಸುಜನ್ ಚಿನಾಯ್ ದಂಪತಿಗಳು








# “ಸಿಡ್ನಿ ಕನ್ನಡ ಸಂಘ – "ಸುವರ್ಣ ಕರ್ನಾಟಕ ೨೦೦೬”

ಈ ವರ್ಷದ ರಾಜ್ಯೋತ್ಸವವು ಕರ್ನಾಟಕ ರಾಜ್ಯದ ಸುವರ್ಣ ಮಹೋತ್ಸ್ಸವವೂ ಕೂಡ. ಈ "ಸುವರ್ಣ ಕರ್ನಾಟಕ ೨೦೦೬"ಸಮಾರಂಭವನ್ನು ಸಿಡ್ನಿ ಕನ್ನಡ ಸಂಘ ಆಕ್ಟೋಬರ್ ೨೮ ನೇ ದಿನಾಂಕದಂದು ಪೆನ್ನಂಟ್ ಹಿಲ್ ಕಮ್ಯುನಿಟಿ ಸೆಂಟರ್‌ನಲ್ಲಿ ಅದ್ದೂರಿಯಿಂದ ಆಚರಿಸಿತು.

ಈ ಸಮಾರಂಭದ ನಿರೂಪಣೆಯ ಜವಾಬ್ದಾರಿಯನ್ನು ಹೊತ್ತ ಶ್ರೀಮತಿ ಶುಭಾ ರವಿ ಮತ್ತು ಶ್ರೀ ಚಂದ್ರ ಶೇಖರ ದೇವುಡು. ಕಾರ್ಯಕ್ರಮವನ್ನು ಕನ್ನಡ ನಾಡ ನುಡಿಯನ್ನು ಪರಿಚಯಿಸುತ್ತ ಸಂಜೆ ಏಳು ಗಂಟೆಗೆ ಪ್ರಾರಂಭಿಸಿದರು

ಸಿಡ್ನಿ ಕನ್ನಡ ಸಂಘದ ಅಧ್ಯಕ್ಷೆ ಡಾ|| ಶ್ರೀಮತಿ ನಾಗಮ್ಮ ಪ್ರಕಾಶ್ ಸಮಾರಂಭದ ಮುಖ್ಯ ಅತಿಥಿಗಳಾದ ಶ್ರೀಮತಿ ನಾಗು ಮತ್ತು ಡಾ|| ಸಿ.ವಿ. ಮಧುಸೂದನ ಮತ್ತು ನೆರೆದಿದ್ದ ಸಭಿಕರನ್ನು ಸ್ವಾಗತಿಸುತ್ತಾ ತಮ್ಮ ಭಾಷಣದಲ್ಲಿ ಲಿವರ್‌ಪೂಲ್ ಕನ್ನಡ ಶಾಲೆ, ಯೋಜನಾಧಿಕಾರಿಗಳಾಗಿ ಶ್ರೀ ಗೋಪೀನಾಥ್ ಅವರ ನೇಮಕ ಮತ್ತು ಶ್ರೀ ಓಂಕಾರಸ್ವಾಮಿ ಅವರ ನೇತೃತ್ವದಲ್ಲಿ ಏಷ್ಯಾ ಪೆಸಿಫ಼ಿಕ್ ಕನ್ನಡ ಒಕ್ಕೂಟದ (APKO) ಸಹಕಾರದಿಂದ ಕರ್ನಾಟಕದ ಪ್ರಸಿದ್ಧ ಕಲಾವಿದರನ್ನು ಮೂರು ವರ್ಷಗಳಿಂದ ಕರೆತಂದು ಕಾರ್ಯಕ್ರಮ ನೆಡೆಸುತ್ತಿರುವುದನ್ನು ವಿವರಿಸಿದರು.

ಅನಂತರ ಶ್ರೀಮತಿ ಪುಷ್ಪ ಜಗದೀಶ್ ಅವರು ಡಾ|| ದುಂಡಪ್ಪ ಕರ್ಕಿಯವರ ‘ಹಚ್ಚೇವು ಕನ್ನಡದ ದೀಪ’ ಜನಪ್ರಿಯ ಗೀತೆಯನ್ನು ಸುಶ್ರಾವ್ಯವಾಗಿ ಹಾಡಿ, ಎಲ್ಲರ ಮನಸ್ಸನ್ನೂ ಸೂರೆಗೊಂಡರು.

ಮುಖ್ಯ ಅಥಿತಿಗಳಾದ ಡಾ|| ಮಧುಸೂದನ ಸಿಡ್ನಿ ಕನ್ನಡ ಸಂಘದ ಅಧ್ಯಕ್ಷೆ ಡಾ|| ಶ್ರೀಮತಿ ನಾಗಮ್ಮ ಪ್ರಕಾಶ್ ಅವರು ನಂದಾದೀಪವನ್ನು ಹೊತ್ತಿಸುವುದರ ಮೂಲಕ."ಸುವರ್ಣ ಕರ್ನಾಟಕ ೨೦೦೬ ಕಾರ್ಯಕ್ರಮ ಆರಂಭವಾಯಿತು

ಡಾ|| ಮಧುಸೂದನ ಅವರು ಸಿಡ್ನಿ ಕನ್ನಡ ಸಂಘದ ಉಗಮ. ಕಳೆದ ೨೩ ವರ್ಷಗಳಲ್ಲಿ ಅದರ ಸಾಧನೆಗಳು, ಮೈಲಿಗಲ್ಲುಗಳು ಮತ್ತು ವಿಶಿಷ್ಟತೆಗಳನ್ನು ಕುರಿತು ಮಾತನಾಡಿದರು. ಅಲ್ಲದೆ ಒಟ್ಟು ಸಿಡ್ನಿ ಕನ್ನಡ ಸಮುದಾಯಕ್ಕೆ ಸಂಬಂಧಪಟ್ಟ ಇತರ ಘಟನೆಗಳನ್ನೂ, ಬೆಳವಣಿಗೆಗಳನ್ನೂ ಅವರು ಸಂಕ್ಷೇಪವಾಗಿ ವಿವರಿಸಿದರು. ಸಂಗೀತ, ನೃತ್ಯ ಮುಂತಾದ ಕಲೆಗಳಿಂದ ಸಿಡ್ನಿ ಕನ್ನಡ ಸಂಘದ ಕಾರ್ಯಕ್ರಮಗಳಿಗೂ ಮತ್ತು ಸಮಾಜಸೇವೆಗೂ ನಮ್ಮ ಕನ್ನಡ ಸಮುದಾಯದ ಯುವಜನರ ಕೊಡುಗೆಯನ್ನು ನಾವು ಸರ್ವಥಾ ಮರೆಯಬಾರದು ಎಂದು ಅವರು ಅಭಿಪ್ರಾಯಪಟ್ಟರು. ಸಿಡ್ನಿ ಕನ್ನಡ ಸಂಘದ ಕಾರ್ಯಕಾರೀ ಸಮಿತಿಯವರ ಮತ್ತು ಮನರಂಜನೆಯ ಕಾರ್ಯಕ್ರಮಗಳ ಜವಾಬ್ದಾರಿ ಹೊತ್ತವರ ಸ್ವಾರ್ಥರಹಿತ ಹಾಗೂ ಉತ್ಸಾಹಭರಿತ ಸೇವೆಗಳಿಗೆ ಸಿಡ್ನಿ ಕನ್ನಡಿಗರು ಎಂದಿಗೂ ಚಿರಋಣಿಗಳಾಗಿದ್ದಾರೆ ಎಂದು ಅವರು ಸ್ಪಷ್ಟಪಡಿಸಿದರು. ಈ ಭಾಷಣದ ಉದ್ದಕ್ಕೂ ಮುಖ್ಯ ಸಾಧನೆಗಳನ್ನು ಹೆಸರಿಸದಾಗಲೆಲ್ಲ, ಸಭಿಕರು ಸ್ವಯಂಪ್ರೇರಿತರಾಗಿ ಕರತಾಡನಮಾಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು.

ಆ ಬಳಿಕ ಮಾತನಾಡಿದ ಶ್ರೀ ಚಂದ್ರಶೇಖರ ದೇವುಡು ಅವರು ಸಾಹಿತ್ಯ, ಸಂಗೀತ, ನಾಟಕ ಮತ್ತು ಚಲನಚಿತ್ರಗಳಲ್ಲಿ ಕರ್ನಾಟಕವು ಕಳೆದ ಐವತ್ತು ವರ್ಷಗಳಲ್ಲಿ ಮಾಡಿರುವ ಸಾಧನೆಗಳನ್ನು ವಿಶದೀಕರಿಸಿದರು. ಶ್ರೀದೇವುಡು ಅವರ ಭಾಷಣಕ್ಕೆ ಬೆಂಗಳೂರು ಪತ್ರಕರ್ತ ಶ್ರೀ ವಿ. ಸನತ್ಕುಮಾರ್ ಅವರ ಧ್ವನಿ ಮುದ್ರಿತ ಕಿರು ಉಪನ್ಯಾಸ ಪೂರಕವಾಗಿತ್ತು. ಶ್ರೀ ದೇವುಡು ಅವರ ವಿಚಾರಾತ್ಮಕ ಭಾಷಣವು ಶ್ಲಾಘನೀಯವಾಗಿತ್ತು.

ಅನಂತರ ಕುಮಾರಿ ದೀಪಿಕಾ ಕುಮ್ಸಿಯವರು ತಮ್ಮ ಕಡೆಗೋಲು ತಾರೆನ್ನ ಚಿನ್ನವೇ ಪುರಂದರದಾಸರ ಕೃತಿಯ ಮೇಲೆ ಆಧಾರಿತವಾದ ಭರತನಾಟ್ಯ ನಂತರ ಕುಮಾರಿ ಅಪೂರ್ವ ‘ಮಸಣದ ಹೂವು’ ಎಂಬ ಚಲನಚಿತ್ರದಿಂದ ಆಯ್ದುಕೊಂಡ ‘ಕನ್ನಡ ನಾಡಿನ ಕರಾವಳಿ’ ಎಂಬ ವೃಂದ ನಾಟ್ಯವು ಎಲ್ಲರಿಗೂ ಇಷ್ಟವಾಯಿತು. ಭಾಗವಹಿಸಿದವರು ; ಅಪೂರ್ವ, ಸಾಂಚಿ, ವೈಷ್ಣವಿ, ತನು, ಚಾಂದಿನಿ, ಮೇಘನಾ, ಭವನಾ ಮತ್ತು ರೋಷನಿ.

ಶ್ರೀಮತಿ ಶುಭಾ ಅವರು ಭಾರತದ ದೂತಾವಾಸದ ಶ್ರೀ ಸುಜನ್ ಚಿನಾಯ್ ಮತ್ತು ಶ್ರೀಮತಿ ವಿದ್ಯಾ ಚಿನಾಯ್ ಅವರನ್ನು ವೇದಿಕೆಗೆ ಸ್ವಾಗತಿಸಿದರು. ಶ್ರೀ ಚಿನಾಯ್ ಅವರು ನಾನು ಸುವರ್ಣ ಕರ್ನಾಟಕದ ಅಳಿಯ' ಎಂದು ತಮ್ಮನ್ನು ಪರಿಚಯಿಸಿಕೊಂಡು ಕನ್ನಡ ಸಮುದಾಯಕ್ಕೆ ಸೇವೆ ಸಲ್ಲಿಸಿದವರಿಗೆ ಪ್ರಶಸ್ತಿಪತ್ರಗಳನ್ನು ವಿತರಿಸಿದರು.

ಅನಂತರ, 'ಒಂದಾನೊಂದು ಹಳ್ಳಿಯಲ್ಲಿ' – ಕರ್ನಾಟಕದ ಗ್ರಾಮಜೀವನವನ್ನು ಚಿತ್ರಿಸುವ ಒಂದು ನೃತ್ಯ-ಗೀತ ರೂಪಕ. ಜಾನಪದದ ಸೊಗದನ್ನು ಹೊಂದಿತ್ತು ಹಿರಿಯರೂ, ಕಿರಿಯರೂ ಭಾಗವಹಿಸಿದ್ದ ಈ ರೂಪಕವು ಮುಗಿದಾಗ ಎಲ್ಲರೂ ಪ್ರಚಂಡ ಕರತಾಡನದಿಂದ ತಮ್ಮ ಮೆಚ್ಚುಗೆಯನ್ನು ಪ್ರದರ್ಶಿಸಿದರು. ಈ ನೃತ್ಯ-ಗೀತ ರೂಪಕ ಬರೆದು ನಿರ್ದೇಶಿಸಿದವರು ಶ್ರೀಮತಿ ಅನು ರಮೇಶ್ ಮತ್ತು ನೃತ್ಯ ಸಂಯೋಜನೆ ಮಾಡಿದವರು ಶ್ರೀಮತಿ ಹೇಮಾ ಸುಧಾಕರ್.

ಶ್ರೀಮತಿ ಗೀತಾ ಗೋಪೀನಾಥ್ ನೃತ್ಯ ಸಂಯೋಜನೆಯಲ್ಲಿ ಆಪ್ತಮಿತ್ರ ಚಲನಚಿತ್ರದ 'ಪಟಾ ಪಟಾ ಗಾಳಿಪಟ' ಹಾಡಿನಮೇಲೆ ಆಧಾರಿತವಾದ ಕೋಲಾಟದಲ್ಲಿ ಭಾಗವಹಿಸಿದವರು: ಗೀತಾ ಮತ್ತು ಗೋಪೀನಾಥ್, ಪುಷ್ಪ ಮತ್ತು ಜಗದೀಶ್, ರಂಜನ ಮತ್ತು ಮುಕುಂದ ಕುಲಕರ್ಣಿ, ಪ್ರತಿಮಾ ಮತ್ತು ನಟರಾಜನ್, ಸಾವಿತ್ರಿ ಮತ್ತು ಕೆ.ಆರ್. ರಾವ್, ಅನು ಮತ್ತು ರಮೇಶ್. ಲವಲವಿಕೆಯಿಂದ ನಡೆದ ಈ ಕೋಲಾಟ ಎಲ್ಲರನ್ನೂ ಹರ್ಷಿಸಿತು.

ಕೋಲಾಟದ ನಂತರ ಅರ್ಧ ಗಂಟೆ ಭೋಜನ ವಿರಾಮ. ಎಲ್ಲರಿಗೂ ಪರಿಚಿತರೊಂದಿಗೆ ಸಂಭಾಷಿಸಲು ಅನುವು ಮಾಡಿ ಕೊಟ್ಟಿತು.

ಸುಮಾರು ೧೦ ಗಂಟೆಗೆ ಪುನರಾರಂಭವಾದ ಕಾರ್ಯಕ್ರಮದಲ್ಲಿ ಕನ್ನಡನಾಡನ್ನು ಕುರಿತ ಚಲನಚಿತ್ರ ಗೀತೆಗಳನ್ನು ಹಾಡಿದವರು: ಡಿ.ವಿ. ಶ್ರೀನಿವಾಸ, ಅಪೂರ್ವ ಮತ್ತು ಪ್ರಕಾಶ್, ನಾರಾಯಣ್ (ರಾಜು), ಕೇದಾರ್‌ನಾಥ್, ನಟರಾಜ್, ನಾಗರಾಜ್ ಮತ್ತು ಶ್ರೀನಿವಾಸ ರಾವ್. ಎಲ್ಲರ ಹಾಡುಗಾರಿಕೆಯೂ ಉತ್ಸಾಹಭರಿತವಾಗಿದ್ದು ನೆರೆದಿದ್ದವರೆಲ್ಲರೂ ಪದೇಪದೇ ತಾಳಕ್ಕೆ ಸರಿಯಾಗಿ ಚಪ್ಪಾಳೆ ಹಾಕುತ್ತಿದ್ದುದು ಕಾರ್ಯಕ್ರಮಕ್ಕೆ ಮೆರಗು ನೀಡಿತ್ತು.

ಭಾರತೀಯ ವಿಮಾನಯಾನ ಸಂಸ್ಥೆಯ ಪ್ರಾದೇಶಿಕ ಅಧಿಕಾರಿಗಳಾದ ಶ್ರೀ ನಕುಲ್ ಚಂದ್ ಅವರು ಎರಡನೆಯ ಭಾಗದ ಪ್ರಶಸ್ತಿ ಪತ್ರಗಳನ್ನು ಸಿಡ್ನಿ ಕನ್ನಡ ಸಂಘ ಮತ್ತು ಕನ್ನಡ ಸಮುದಾಯಕ್ಕೆ ಸೇವೆ ಸಲ್ಲಿಸಿದ ಅನೇಕ ದಂಪತಿಗಳಿಗೆ ವಿತರಿಸಿದರು.

ತಮ್ಮ ವಂದನಾರ್ಪಣೆಯಲ್ಲಿ ಸಿಡ್ನಿ ಕನ್ನಡ ಸಂಘದ ಉಪಾಧ್ಯಕ್ಷ ಶ್ರೀ ಜಗದೀಶ್ ಸೂರಿ ಅವರು – ಮುಖ್ಯ ಅತಿಥಿ ಡಾ|| ಮಧುಸೂದನ, ಗೌರವ ಅತಿಥಿಗಳಾದ ಶ್ರೀಮತಿ ವಿದ್ಯಾ ಮತ್ತು ಶ್ರೀ ಸುಜನ್ ಚಿನಾಯ್, ಶ್ರೀಮತಿ ಮತ್ತು ಶ್ರೀ ನಕುಲ್ ಚಂದ್. ಸುವರ್ಣ ಕರ್ನಾಟಕ ೨೦೦೬ ಕಾರ್ಯಕ್ರಮದ ಪ್ರಾಯೋಜಕರಾದ, **City Forex** ನ ಶ್ರೀ ನರೇಂದ್ರ ನಾಯಕ್, **Supreme Engineering** ನ ಶ್ರೀ ಗಿರಿ ಭಟ್ **Xpress Money** ಯ ಶ್ರೀ ಸುಭಾಷ್ ಶೆಟ್ಟಿ **SBS Radio** ದ ಶ್ರೀ ಚಂದ್ರಶೇಖರ ದೇವುಡು ಮತ್ತು ಶ್ರೀ ಸ್ಟಾನ್ಲಿ ಜೋಸೆಫ್ ಮತ್ತು ಸ್ವಯಂಸೇವಕರು, ಎಲ್ಲ ಸಭಾಸದರು, ವಿಡಿಯೋಗ್ರಫಿ ಮಾಡಿದ ಶ್ರೀ ಶಾಮ್ ಸಿಂಗ್ ಮತ್ತು ಛಾಯ ಚಿತ್ರ ತೆಗೆದ ಶ್ರೀ ವಿಕ್ರಮ್ ಬೇಕಲ್,ಧ್ವನಿವರ್ಧಕವನ್ನು ಒದಗಿಸಿದ ಶ್ರೀ ರಿಚರ್ಡ್ ಸಿಂಗ್ ಮತ್ತು ಪ್ರಚಾರದಲ್ಲಿ ನೆರವು ನೀಡಿದ ಇಂಡಿಯಾ ಲಿಂಕ್ ರೇಡಿಯೂದ ಶ್ರಿ ರಾಜನಟರಾಜನ್,ಚಂದನ ಏಷ್ಯಾ ಪೆಸಿಫಿಕ್ ಟಿವಿಯ ಸಂಚಾಲಕರಾದ ಶ್ರೀ ಓಂಕಾರಸ್ವಾಮಿಯವರಿಗೂ ಸಿಡ್ನಿ ಕನ್ನಡ ಸಂಘದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಿದರು.



ಅಧ್ಯಕ್ಷೆ ಡಾ ನಾಗಮ್ಮ ಪ್ರಕಾಶ್ ಶ್ರೀ ನಕುಲ್ ಚಂದ್



ಉಪಾಧ್ಯಕ್ಷ ಶ್ರೀ ಜಗದೀಶ್ ಸೂರಿ

# ಕಾರ್ಯಕ್ರಮದ_ಛಾಯ ಚಿತ್ರಗಳು











